62K

# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ

6ನೇ ಅಡ್ಡರಸ್ತೆ, ಮಲ್ಲೇಶ್ವರಂ,ಬೆಂಗಳೂರು – 560003

# KARNATAKA SCHOOL EXAMINATION AND ASSESSMENT BOARD

6th Cross, Malleshwaram, Bengaluru – 560003

## 2025 -26 ರ ಎಸ್.ಎಸ್.ಎಲ್.ಸಿ ಮಾದರಿ ಪ್ರಶ್ನೆ ಪತ್ರಿಕೆ–2

## S.S.L.C. MODEL QUESTION PAPER- 2 : 2025-26

### ವಿಷಯ : ತೃತೀಯ ಭಾಷೆ ಕನ್ನಡ

### Subject : Third Language - KANNADA

**ಸಮಯ: 3 ಗಂಟೆ** **ವಿಷಯ ಸಂಕೇತ : 62K**

**ಗರಿಷ್ಠ ಅಂಕಗಳು : 80** **Subject code : 62K**

---

**ಪರೀಕ್ಷಾರ್ಥಿಗಳಿಗೆ ಸಾಮಾನ್ಯ ಸೂಚನೆಗಳು:**

1. ಪ್ರಶ್ನೆ ಪತ್ರಿಕೆಯು ಒಟ್ಟು 38 ಪ್ರಶ್ನೆಗಳನ್ನು ಹೊಂದಿದೆ
2. ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ
3. ಬಲ ಭಾಗದಲ್ಲಿ ಕೊಟ್ಟಿರುವ ಅಂಕಗಳು ಪ್ರಶ್ನೆಗಳಿಗಿರುವ ಪೂರ್ಣಅಂಕಗಳನ್ನು ಸೂಚಿಸುತ್ತವೆ.
4. ಪ್ರಶ್ನೆ ಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ,ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆ ಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

---

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನಾರಿಸಿ, ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ.** **8x1=8**

1. ಕನ್ನಡ ವರ್ಣಮಾಲೆಯಲ್ಲಿರುವ ಒಟ್ಟು ವ್ಯಂಜನಾಕ್ಷರಗಳ ಸಂಖ್ಯೆ
   ಎ) 13
   ಬಿ) 34
   ಸಿ) 25
   ಡಿ) 09

2. 'ಸ್ವಾತಂತ್ರ್ಯ' ಈ ಪದದ ವಿರುದ್ಧಾರ್ಥಕ ಪದ
   ಎ) ಅಪಸ್ವಾತಂತ್ರ್ಯ
   ಬಿ) ಬಿಡುಗಡೆ
   ಸಿ) ಪಾರತಂತ್ರ್ಯ
   ಡಿ) ನಿಸ್ವಾತಂತ್ರ್ಯ

3. 'ಪುಸ್ತಕ' ಈ ಪದದ ತದ್ಭವ ರೂಪ
   ಎ) ಹೊತ್ತಗೆ
   ಬಿ) ಬುಸ್ತಕ
   ಸಿ) ಬುಕ್
   ಡಿ) ಹುಸ್ತಕ

4. ಭಾರತೀಯ ಸಂಸ್ಕೃತಿಯಲ್ಲಿ ಗುರುಗಳಿಗೆ ಅಗ್ರಸ್ಥಾನವಿದೆ. ಈ ವಾಕ್ಯದಲ್ಲಿರುವ 'ಗುರುಗಳಿಗೆ' ಪದವು ಈ ವಿಭಕ್ತಿಗೆ ಉದಾಹರಣೆಯಾಗಿದೆ
   ಎ) ಪ್ರಥಮ
   ಬಿ) ತೃತೀಯ
   ಸಿ) ಚತುರ್ಥಿ
   ಡಿ) ಪಂಚಮಿ

5. ಕೆಳಗಿನವುಗಳಲ್ಲಿ ಆಗಮ ಸಂಧಿಗೆ ಉದಾಹರಣೆಯಾದ ಪದ
   ಎ) ದೇವೋನ್ಮಾದ
   ಬಿ) ಮಹಾತ್ಮ
   ಸಿ) ಜೀವನೋತ್ಸಾಹ
   ಡಿ) ತಲೆಯನ್ನು

6. ಬರವಣಿಗೆಯಲ್ಲಿ ಇನ್ನೊಬ್ಬರ ಹೇಳಿಕೆಯನ್ನು ಯಥಾವತ್ತಾಗಿ ತಿಳಿಸಲು ಬಳಸುವ ಲೇಖನ ಚಿಹ್ನೆ
   ಎ) ಉದ್ಧರಣ
   ಬಿ) ಆವರಣ
   ಸಿ) ಭಾವಸೂಚಕ
   ಡಿ) ಪ್ರಶ್ನಾರ್ಥಕ

7. 'ಗೌರಿಯ ಮುಖ ಕಮಲದಂತೆ ಅರಳಿತು' ಈ ವಾಕ್ಯದಲ್ಲಿರವ ಅಲಂಕಾರ
   ಎ) ರೂಪಕಾಲಂಕಾರ
   ಬಿ) ಉತ್ಪ್ರೇಕಾಲಂಕಾರ
   ಸಿ) ಉಪಮಾಲಂಕಾರ
   ಡಿ) ದೃಷ್ಟಾಂತಾಲಂಕಾರ

8. ಭವಿಷ್ಯತ್ ಕಾಲದ ಕಾಲಸೂಚಕ ಪ್ರತ್ಯಯವಿದು
   ಎ) ದ
   ಬಿ) ಉವ
   ಸಿ) ಉತ್ತ
   ಡಿ) ಉದ

**II. ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿರುವ ಸಂಬಂಧದಂತೆ ಮೂರನೇಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ.** **4x1=4**

9. ಗೊರೂರು : ಭಾರತ : : ಮಿನಿಪೊಲೀಸ್ ನಗರ : ------------
10. ಶಿಶುನಾಳದ ಸಂತ : ಶರೀಫರು : : ಹುಲುಗೂರಿನ ಸಂತ: -------------
11. ಸ್ವಸ್ವಭಾವ ಚಹರೆ ಬೇರೆ : ತಾಯ ಬಸಿರು ಒಂದೆ : : ಕಳಸ ಶಿಲುಬೆ ಬಿಳಿ ಮಿನಾರು : --------
12. ಸಾವಿರಾರು ಕೆರೆ ತುಂಬಿ : ಜೋತಾಡು ತಾವೆ ಕುಣಿಗಲು : : ಕುಚ್ಚಲು ಮೀನು : --------

**III. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **4x1=4**

13. ಉಲ್ಲಾಳದ ರಾಣಿ ಯಾರು ?
14. ನವೀನ ಯುಗದ ಕೇತನ ಯಾವುದು ?
15. ಧರ್ಮಪದನು ಯಾವ ದೇವಾಲಯದ ಮಹಾದ್ವಾರಕ್ಕೆ ಕಳಶವನ್ನು ಕೂಡಿಸಿದನು ?
16. ನಾಗೇಶ್ ಹೆಗಡೆಯವರು ಹೈಸ್ಕೂಲ್ ಶಿಕ್ಷಣವನ್ನು ಎಲ್ಲಿ ಪಡೆದರು ?

**IV. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ** **8x2=16**

17. ಗಾಂಧೀಜಿಯವರು ಗೌರಮ್ಮನವರ ಮನೆಗೆ ಏಕೆ ಬಂದರು ?
18. ಮೋಹನಾಪುರದ ಸತ್ಯಾಗ್ರಹಿಗಳು ಮಾಡುತ್ತಿದ್ದ ಘೋಷಣೆಗಳಾವುವು ?
19. ಕುಲಕರ್ಣಿಯು ರಾಮಸಿಂಗನ ಮೇಲೆ ಗುಂಡು ಹಾರಿಸಲು ಕಾರಣವಾದ ಅಂಶಗಳನ್ನು ಬರೆಯಿರಿ.
20. 'ವಿಶ್ವಮಿತ್ರ ಸೃಷ್ಟಿ'ಯು ಬೀಚಿಯವರ ಮೇಲೆ ಬೀರಿದ ಪ್ರಭಾವವೇನು ?
21. ಗ್ರಂಥಾಲಯವನ್ನು ಹೊಕ್ಕಾಗ ಕವಿಗೆ ಆದ ಅನುಭವವನ್ನು ತಿಳಿಸಿ.
22. ಡಾಂಬಿಕ ಭಕ್ತನ ಮನಸ್ಸು ಯಾವ ಯಾವ ಗುಣಗಳಿಂದ ತುಂಬಿದೆ ?
23. ನಿಜವಾಗಿ ಪುರಂದರವಿಠಲನನ್ನು ಕಾಣುವ ಬಗೆಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.
24. ಭಟ ಮತ್ತು ಆಚಾರವಂತರ ಅರ್ಹತೆಗಳನ್ನು ಕುರಿತು ಬರೆಯಿರಿ.

**V. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭದೊಡನೆ ಸ್ವಾರಸ್ಯಗಳನ್ನು ಬರೆಯಿರಿ** **2x3=6**

25. "ದಯವಿಟ್ಟು ಇದನ್ನು ಓದಿ"
26. " ಪಾರ್ಥನೊಲು ತತ್ತರಿಸಿ ವಿಸ್ಮಿತನಾಗಿ"

**VI. ಕೆಳಗಿನ ಪ್ರಶ್ನೆಗಳಿಗೆ ಐದು ಅಥವಾ ಆರು ವಾಕ್ಯಗಳಲ್ಲಿ ಉತ್ತರ ಬರೆಯಿರಿ** **4x3=12**

27. ಮಿನಿಪೊಲೀಸ್ ನಗರದಲ್ಲಿ ಗೊರೂರು ತಪ್ಪಿಸಿಕೊಂಡ ಪ್ರಕರಣವನ್ನು ವಿವರಿಸಿರಿ.
28. ಕರ್ಬಲಾ ಮತ್ತು ಅಲಾವಿಗಳ ನಡುವಿನ ವ್ಯತ್ಯಾಸವನ್ನು ತಿಳಿಸಿರಿ.
29. ನವಯುಗದ ನಿರ್ಮಾಣದಲ್ಲಿ ಯುವಜನತೆಯ ಪಾತ್ರವನ್ನು ನೀವು ಮೆಚ್ಚುವ ಅಂಶಗಳೊಂದಿಗೆ ವಿವರಿಸಿ.
30. ಮಳೆದೇವರಲ್ಲಿ ರೈತನು ಬೇಡಿಕೊಳ್ಳುವ ಪರಿಯನ್ನು ನಿಮ್ಮ ಮಾತಿನಲ್ಲಿ ಬರೆಯಿರಿ.

**VII. ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿಗಳನ್ನು ಕುರಿತು ವ್ಯಾಕ್ಯರೂಪದಲ್ಲಿ ಬರೆಯಿರಿ.** **2x3=6**

31. ಮ.ನ ಮುಕ್ತಾಯಿ
32. ಕೆ.ಎಸ್.ನಿಸಾರ್ ಅಹಮದ್

**VIII. ಕೆಳಗಿನ ಗಾದೆಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು ವಿಸ್ತರಿಸಿ ಬರೆಯಿರಿ** **1x3=3**

33. "ಕುಂಬಾರನಿಗೆ ವರ್ಷ: ದೊಣ್ಣೆಗೆ ನಿಮಿಷ"

**ಅಥವಾ**

"ಕೈ ಕೆಸರಾದರೆ ಬಾಯಿ ಮೊಸರು"

**IX. ಕೆಳಗಿನ ಯಾವುದಾದರು ಒಂದು ಪ್ರಶ್ನೆಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

34. ರಾಣಿ ಅಬಕ್ಕದೇವಿಯು ಪೋರ್ಚುಗೀಸರನ್ನು ಹೇಗೆ ಓಡಿಸಿದಳು ? ವಿವರಿಸಿರಿ.

ಅಥವಾ

ಕಿತ್ತೂರು ರಾಣಿ ಚೆನ್ನಮ್ಮನ ಸ್ವಾಭಿಮಾನ ಮತ್ತು ದೇಶಾಭಿಮಾನವನ್ನು ಕುರಿತು ಬರೆಯಿರಿ.

**X. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ.** **1x4=4**

35. ಕಳಬೇಡ, ಕೊಲಬೇಡ ------------------------
------------------------------------
------------------------------------
----------------------ಇದೇ ಬಹಿರಂಗ ಶುದ್ಧಿ

ಅಥವಾ

ದೇವಲೋಕ, ಮರ್ತ್ಯಲೋಕ ----------------
------------------------------------
------------------------------------
-------------------------ನೀವೇ ಪ್ರಮಾಣು.

**XI. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.** **1x4=4**

36. ರೈತರನ್ನು 'ಅನ್ನದಾತ' ದೇಶದ 'ಬೆನ್ನೆಲುಬು' ಎಂದೆಲ್ಲ ಕರೆಯುತ್ತಾರೆ. ಆದರೆ ಇಂದು ರೈತರ ಪರಿಸ್ಥಿತಿ ಚಿಂತಾಜನಕವಾಗಿದೆ. ನಿಸರ್ಗದ ಜೊತೆ ಸೆಣೆಸಾಡಬೇಕು. ಸಕಾಲಕ್ಕೆ ಸರಿಯಾಗಿ ಮಳೆ ಬರುವುದಿಲ್ಲ. ಉತ್ತಮ ಗುಣಮಟ್ಟದ ಬೀಜ ಗೊಬ್ಬರದ ಸಮಸ್ಯೆಯಿಂದ ಭೂಮಿ ಬರಿದಾಗುತ್ತಿದೆ. ಕ್ರಿಮಿಕೀಟಗಳ ಹಾವಳಿಯಿಂದ ಬೆಳೆಗೆ ರೋಗಗಳು ತಗುಲಿ ಬೆಳೆ ಸಿಗದ ಸಮಸ್ಯೆ, ಬೆಳೆ ಬೆಳೆದರೂ ಸರಿಯಾದ ಬೆಲೆ ಸಿಗದೆ ರೈತರು ಸಾಕಷ್ಟು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ವ್ಯವಸಾಯ ಇಲ್ಲದಿದ್ದರೆ ದೇಶದ ಆಟವೇ ನಡೆಯದು. ಕೃಷಿಕರು. ಭೂಮಿಯನ್ನು ಉಳುವುದಿಲ್ಲ ಎಂದು ಸತ್ಯಾಗ್ರಹ ಮಾಡಿದರೆ, ಜನರು ಆಹಾರವಿಲ್ಲದೆ ಸಾಯುವ ಪರಿಸ್ಥಿತಿ ಬರುತ್ತದೆ. ದೇಶದ ಅಭಿವೃದ್ಧಿ ಕುಂಠಿತವಾಗುತ್ತದೆ. ಗೆಡ್ಡೆ-ಗೆಣಸುಗಳನ್ನು ತಿಂದು, ಎಲೆಗಳ ರಸ, ಕುಡಿದು ಬದುಕುವ ಕಾಲ ಮತ್ತೆ ಬರಬಹುದು. ಆಹಾರಕ್ಕಾಗಿ ಮನುಷ್ಯರು ಮತ್ತು ಪ್ರಾಣಿಗಳ ನಡುವೆ ಹೋರಾಟ ಏರ್ಪಡಬಹುದು. ಆಹಾರವಿಲ್ಲದೆ ಬದುಕಲು ಸಾಧ್ಯವಿಲ್ಲ. ಅಕ್ಕಿ, ರಾಗಿ, ಗೋಧಿ, ಜೋಳ, ತರಕಾರಿಗಳನ್ನು ತಯಾರಿಸುವ ಯಾವ ಕಾರ್ಖಾನೆಗಳು ಇಲ್ಲ. ಇವಕ್ಕೆಲ್ಲ ರೈತರ ಬೆವರು ಭೂಮಿಗೆ ಸುರಿಯಬೇಕು.

**ಪ್ರಶ್ನೆಗಳು**

ಅ) ದೇಶದ ಬೆನ್ನೆಲುಬು ಎಂದು ಯಾರನ್ನು ಕರೆಯುತ್ತಾರೆ ?

ಆ) ಯಾವ ಸಮಸ್ಯೆಯಿಂದ ಭೂಮಿ ಬರಿದಾಗುತ್ತಿದೆ ?

ಇ) ಮನುಷ್ಯರು ಮತ್ತು ಪ್ರಾಣಿಗಳ ನಡುವೆ ಯಾವುದಕ್ಕಾಗಿ ಹೋರಾಟ ಏರ್ಪಡಬಹುದು ?

ಈ) ಯಾವ ಆಹಾರ ಸಾಮಗ್ರಿಗಳನ್ನು ತಯಾರಿಸುವ ಕಾರ್ಖಾನೆಗಳಿಲ್ಲ ?

**XII. ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ.** **1x4=4**

37. ಜಲ ಸಂರಕ್ಷಣೆ

ಅಥವಾ

ಸಂಪರ್ಕ ಮಾಧ್ಯಮದ ಉಪಯೋಗ ಮತ್ತು ದುಷ್ಪರಿಣಾಮ

**XIII. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ.** **1x5=5**

38. ನಿಮ್ಮನ್ನು ಶಿವಮೊಗ್ಗಾದ ಕುವೆಂಪು ಪ್ರೌಢಶಾಲೆಯ ವಿದ್ಯಾರ್ಥಿನಿ 'ಸಾನ್ವಿತ' ಎಂದು ಭಾವಿಸಿಕೊಂಡು, ನಿಮ್ಮ ಶಾಲೆಗೆ 10 'ಕನ್ನಡ ವ್ಯಾಕರಣದರ್ಶಿನಿ' ಪುಸ್ತಕಗಳನ್ನು ಕಳುಹಿಸಿಕೊಡುವಂತೆ ಕೋರಿ ಬೆಂಗಳೂರಿನಲ್ಲಿರುವ ಸ್ವಪ್ನಬುಕ್ ಹೌಸ್‌ನ ವ್ಯವಸ್ಥಾಪಕರಿಗೆ ಒಂದು ಪತ್ರವನ್ನು ಬರೆಯಿರಿ.

**ಅಥವಾ**

ನಿಮ್ಮನ್ನು ಬೆಂಗಳೂರಿನ ಸುಭಾಷ್ ಪ್ರೌಢಶಾಲೆಯಲ್ಲಿ ಓದುತ್ತಿರುವ 'ಸೌಮ್ಯ' ಎಂದು ಭಾವಿಸಿಕೊಂಡು ಶಾಲೆಯಲ್ಲಿ ನಡೆದ ಮಕ್ಕಳ ದಿನಾಚರಣೆಯ ಕಾರ್ಯಕ್ರಮವನ್ನು ಕುರಿತು, ಮೈಸೂರಿನ ಅರವಿಂದ ನಗರ ಬಡಾವಣೆಯಲ್ಲಿ ವಾಸವಾಗಿರುವ 'ಶಾಲಿನಿ' ಎಂಬ ಹೆಸರಿನ ನಿಮ್ಮ ಗೆಳತಿಗೆ ಒಂದು ಪತ್ರ ಬರೆಯಿರಿ.